ವನ್ಯಜೀವಿ ವಿಭಾಗ

558 (821) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಿಗೆ ಅಂತರ್ಜಲ ಮತ್ತು ನೀರಾವರಿಗಾಗಿ ಕೆಲವು ವರ್ಷಗಳ ಹಿಂದೆ ರೂಪಿಸಲಾದ ಪಶ್ಚಿಮವಾಹಿನಿ ಯೋಜನೆಯು ಯಾವ ಹಂತದಲ್ಲಿದೆ;

ಆ) ಹಾಗಿದ್ದಲ್ಲಿ, ಆ ಯೋಜನೆಯಲ್ಲಿ ತೆಗೆದುಕೊಳ್ಳಲು ರೂಪಿಸಿದ ಕಾಮಗಾರಿವಾರು ವಿವರ ಒದಗಿಸುವುದು;

ಇ) ಸದರಿ ಕಾಮಗಾರಿ ಅನುಷ್ಠಾನ ಯಾವಾಗ ಮಾಡಲಾಗುವುದು ಮತ್ತು ತಡವಾಗಲು ಕಾರಣವೇನು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

ಅ) ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಿಗೆ ಕಿಂಡಿ ಅಣೆಕಟ್ಟು ಹಾಗೂ ಉಪ್ಪು ನೀರು ತಡೆ ಅಣೆಕಟ್ಟು ನಿರ್ಮಾಣ ಮತ್ತು ನದಿ ದಂಡೆ ಸಂರಕ್ಷಣೆ ಕಾಮಗಾರಿಗಳನ್ನು ನಿರ್ಮಾಣ ಮಾಡಲು ಒಟ್ಟು ರೂ. 712.70 ಕೋಟಿ ಮೊತ್ತದ ಒಂದು ಸಮಗ್ರ ಯೋಜನೆಯನ್ನು ತಯಾರಿಸಿ ಕೇಂದ್ರ ಸರ್ಕಾರದ ಎ.ಐ.ಬಿ.ಪಿ ಕಾರ್ಯಕ್ರಮದಡಿ ಅನುಮೋದನೆ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಆದರೆ, ಕೇಂದ್ರ ಜಲಸಂಪನ್ಮೂಲ ಮಂತ್ರಾಲಯವು ಪ್ರಸ್ತಾಪಿತ ಯೋಜನಾ ಪ್ರದೇಶವು ಬರಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮದ ತಾಲ್ಲೂಕು (D.P.A.P)/ ಬುಡಕಟ್ಟು ಪ್ರದೇಶವಾಗದೇ ಇರುವುದರಿಂದ ಎ.ಐ.ಬಿ.ಪಿ. ಮಾರ್ಗಸೂಚಿಯಂತೆ ಪರಿಗಣಿಸಲು ಅವಕಾಶವಿಲ್ಲವೆಂದು ಹಾಗೂ ಪ್ರಸ್ತುತ ಇರುವ ಎ.ಐ.ಬಿ.ಪಿ ಮಾರ್ಗಸೂಚಿಗಳನ್ನು ಸಡಿಲಗೊಳಿಸಿ ಈ ಯೋಜನೆಗಳನ್ನು ಎ.ಐ.ಬಿ.ಪಿ ಅಡಿ ಪರಿಗಣಿಸಲು ಸಾಧ್ಯವಿಲ್ಲವೆಂದು ದಿನಾಂಕ: 21.12.2010 ರ ಪತ್ರದಲ್ಲಿ ತಿಳಿಸಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಪಶ್ಚಿಮವಾಹಿನಿ ಯೋಜನೆಗೆ ಕೇಂದ್ರ ಸರಕಾರದಿಂದ ಅನುಮೋದನೆ ದೊರಕದ ಕಾರಣ ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ ನದಿಗಳು ಹಾಗೂ ಕೊಳ್ಳಗಳಿಂದ ಸಮುದ್ರಕ್ಕೆ ಹೋಗುತ್ತಿರುವ ನೀರನ್ನು ಶೇಖರಿಸಿ ಸಂರಕ್ಷಿಸಿ ಬಳಕೆ ಮಾಡಲು ಸರಕಾರವು ಕಿಂಡಿ ಅಣೆಕಟ್ಟು ನಿರ್ಮಾಣಕ್ಕೆ ವಿಶೇಷ ಒತ್ತು ನೀಡಿದೆ. 2011–12 ಮತ್ತು 2012–13ನೇ ಸಾಲಿನ ಕೃಷಿ ಬಜೆಟ್‌ನಲ್ಲಿ ಮಾಡಿರುವ ಘೋಷಣೆಯಂತೆ ಕಾಮಗಾರಿಗಳನ್ನು ರಾಜ್ಯದ ಅನುದಾನದಲ್ಲಿ ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದೆ.

ಶ್ರೀ ಗೋಪಾಲ ಭಂಡಾರಿ ಹೆಚ್. ಮಾನ್ಯ ವಿಧಾನ ಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 821 ಕ್ಕೆ ಅನುಬಂಧ

(ಮೊತ್ತ ಕೋಟಿ ರೂ.ಗಳಲ್ಲಿ)

ಕ್ರ. ಸಂ.	ಜಿಲ್ಲೆ	ಉಪ್ಪು ನೀರು ತಡೆ ಅಣೆಕಟ್ಟು		ಕಿಂಡಿ ಅಣೆಕಟ್ಟು		ಉಪ್ಪು ನೀರು ತಡೆ ಅಣೆಕಟ್ಟು ಹಾಗೂ ಕಿಂಡಿ ಅಣೆಕಟ್ಟುಗಳ ಒಟ್ಟು ಅಂದಾಜು ಮೊತ್ತ	ನದಿ ದಂಡೆ ಸಂರಕ್ಷಣೆ ಕಾಮಗಾರಿಗಳು		ಒಟ್ಟು
		ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ		ಸಂಖ್ಯೆ	ಮೊತ್ತ	
1	ದಕ್ಷಿಣ ಕನ್ನಡ	3	2.10	289	83.76	85.86	147	101.31	187.17
2	ಉಡುಪಿ	12	28.55	174	95.33	124.88	76	62.51	187.39
3	ಉತ್ತರ ಕನ್ನಡ	68	149.25	321	98.59	247.84	90	90.30	338.14
	ಒಟ್ಟು	83	180.90	784	277.68	458.58	313	254.12	712.70